ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವುದಕ್ಕೆ "ಲಿಖಿತ ಮೂಲಕ ಬಂದಿರುವುದಿಲ್ಲ, ಮಾಧ್ಯಮಗಳ ಮೂಲಕ ಬಂದಿದೆ" ಎಂದು ಉತ್ತರವನ್ನು ಕೊಟ್ಟಿದ್ದಾರೆ. ಮಾಧ್ಯಮಗಳ ಮೂಲಕವೆಂದರೆ ಲಿಖಿತ ಮೂಲಕ ಅಲ್ಲವೇ?

ಶ್ರೀ ಎಸ್.ಎಸ್.ಪಾಟೀಲ್: ಈ ನಮೂನೆ ಉತ್ತರವನ್ನು ಕೊಡುತ್ತಾರಲ್ಲ, ಇದು ಸರಿಯೇ? ಅಧಿಕಾರಿಗಳು ಏನು ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು: ಈಗ ಡಿ.ಆರ್.ಪಾಟೀಲರು ಅವರು ಇಲ್ಲ.

ಶ್ರೀ ಕುಮಾರ್ ಬಂಗಾರಪ್ಪ: ಇದನ್ನು ಇಲ್ಲಿಗೆ ಬಿಟ್ಟು ಬಿಡುವುದಾ?

ಅಧ್ಯಕ್ಷರು: ಏನಪ್ಪ, ಮಾಡುತ್ತೀಯಾ? ಅದಕ್ಕೆ.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಅಧ್ಯಕ್ಷರೇ, ದಿನಾಂಕ 09.02.2007 ರಂದು 9ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 64 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆ ಬಗ್ಗೆ ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು: ಇವತ್ತು ಶೂನ್ಯವೇಳೆ ಇಲ್ಲ. ಗಮನ ಸೆಳೆಯುವ ಸೂಚನೆಯೂ ಇಲ್ಲ. ಇವತ್ತು ಏನಾಗಿದೆ ಎಂದರೆ ನಿಯಮ 69 ರ ಮೇಲೆ ಈ ಬರಪರಿಸ್ಥಿತಿ ಬಗ್ಗೆ ಏನು ಚರ್ಚೆ ಇದೆ, ಆ ಚರ್ಚೆ ಮತ್ತು ಉತ್ತರ ಇವತ್ತು ಮುಗಿಯಬೇಕು. ಆ ಕಾರಣದಿಂದ ಇವತ್ತು ತೆಗೆದುಕೊಳ್ಳುತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಶೂನ್ಯವೇಳೆ ಒಂದೇ ಒಂದು ನಿಮಿಷ.

ಅಧ್ಯಕ್ಷರು: ನಾನು ನಿಮಗೆ ಸೋಮವಾರ ಅವಕಾಶವನ್ನು ಕೊಡುತ್ತೇನೆ. ಸೋಮವಾರ ಎಲ್ಲರೂ ಕೇಳಿದ್ದಾರೆ. ಆವತ್ತು ಕೊಡುತ್ತೇನೆ. ಈಗ ಜಯಪ್ರಕಾಶ್ ಹೆಗ್ಡೆಯವರೇ ಮಾತನಾಡಿ.

ಶ್ರೀ ಜೆ.ಪಿ.ಮಾಧುಸ್ವಾಮಿ: ಇವತ್ತು ಎಷ್ಟು ಹೊತ್ತಿನವರೆಗೂ ನಡೆಸುತ್ತೀರಿ?